ಓ.ಎಸ್. ನಂ. 84/2013

ಡಿ.ಡಬ್ಲ್ಯು: 01 (ಪಾಲಯ್ಯ)

ದಿನಾಂಕ: 04.04.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು: ವಾದಿ ಪರ – ಶ್ರೀ ಎ ಎಸ್ ಪಿ ವಕೀಲರಿಂದ.

ದಾವಾ ಆಸ್ತಿ ದಾಸಪ್ಪ ಅಲಿಯಾಸ್ ದಾಸರ ಓಬಯ್ಯ ತಂದೆ ನಾಯಕರ ದೊಡ್ಡ ಬೋರಯ್ಯರವರ ಆಸ್ತಿ ಎಂದರೆ ಹೌದು. ನನ್ನ ಅಜ್ಜಿ ಪಾಲಮ್ಮ ಆತನಿಗೆ ಮೊದಲನೇಯ ಹೆಂಡತಿ ಎಂದರೆ ಹೌದು. ವಾದಿಗಳು ಆತನ 2 ನೇಯ ಹೆಂಡತಿಯ ಮಕ್ಕಳು ಎಂದರೆ ಸುಳ್ಳು. ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ಹಾಜರುಪಡಿಸಿದ್ದು ಅದರಲ್ಲಿ ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿ ಎಂದು ಕಾಣಿಸುತ್ತಿದೆ ಎಂದರೆ ಅವರು ಹಾಜರುಪಡಿಸಿರುವ ದಾಖಲಾತಿಗಳ ಬಗ್ಗೆ ನನಗೆ ಗೊತ್ತಿಲ್ಲ.

ನಿಪಿ 34, 35 ರಲ್ಲಿ ನಾನು ವಾದಿಗಳು ದಾಸರ ಓಬಯ್ಯನ ಮಕ್ಕಳು ಎಂದು ಬರೆಸಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಇದೆ ನ್ಯಾಯಾಲಯದಲ್ಲಿ ಹೂಡಿದ್ದ ಅ.ದಾ. ಸಂಖ್ಯೆ 119/2007 ರಲ್ಲಿ ವಾದಿಗಳನ್ನು ದಾಸರ ಓಬಯ್ಯನ ಮಕ್ಕಳು ಎಂದು ತೋರಿಸಿದ್ದಾರೆ ಎಂದರೆ ನನಗೆ ಓದಲು ಬರೆಯಲು ಬರುವುದಿಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆ ಸದರಿ ದಾವೆಯನ್ನು ಹೂಡಿದ್ದು, ಗಂಗಮ್ಮ ಮತ್ತು ಪಾಲಮ್ಮ ಮನೆ ಕಟ್ಟಲು ಶುರು ಮಾಡಿದ ಕಾರಣ ಅದನ್ನು ಹೂಡಲಾಗಿತ್ತು. ಸದರಿ ದಾವೆಯಲ್ಲಿ ವಾದಿಗಳಾದ ಗಂಗಮ್ಮ ಮತ್ತು ಪಾಲಮ್ಮ ಮೋಜಣಿ ಮಾಡಿಸಿದಾಗ ಸ್ವಾಧೀನದಲ್ಲಿದ್ದ ಕಾರಣ ಸದರಿ ದಾವೆಯನ್ನು ಹಿಂಪಡೆಯಲಾಯಿತು ಎಂದರೆ ಸುಳ್ಳು.

ಅ.ದಾ. 29/2007 ರಲ್ಲಿ ನಾವು ಮತ್ತು ವಾದಿಗಳಾದ ಗಂಗಮ್ಮ ಮತ್ತು ಪಾಲಮ್ಮ ಈ ದಾವೆಯ ದಾವಾ ಆಸ್ತಿಯ ಜಂಟಿ ಸ್ವಾಧೀನದಲ್ಲಿದ್ದ ಕಾರಣ ಅದನ್ನು ಹಿಂಪಡೆಯಲಾಯಿತು ಎಂದರೆ ಸುಳ್ಳು. ನಿಪಿ 15 ರಲ್ಲಿ ನಾವು ಹೇಳಿಕೆ ನೀಡಿರುತ್ತೇವೆ ಎಂದರೆ ಸುಳ್ಳು. ನಿಪಿ 15 ರಲ್ಲಿ ಹೇಳಿರುವ ಸರ್ವೇ ನಾನು ಮಾಡಿಸಿರುವುದಿಲ್ಲ. ನಿಪಿ 15 ರಲ್ಲಿರುವ ಪಾಲಯ್ಯ ಎಂಬ ಸಹಿ ನನ್ನದೇ ಇರಬಹುದು, ನಾನು ಅದರಲ್ಲಿ ಹೇಳಿಕೆ ನೀಡಿರುವುದಿಲ್ಲ. ದಾವಾ ಆಸ್ತಿಯಲ್ಲಿ ನಾನು ಹಾಗೂ ವಾದಿಗಳು ಈಗಲೂ ಜಂಟಿ ಸ್ವಾಧೀನದಲ್ಲಿದ್ದೇವೆ ಎಂದರೆ ಸುಳ್ಳು. ನಾನು ಕಳೆದ ವರ್ಷ ವಾದಿಗಳನ್ನು ದಾವಾ ಆಸ್ತಿಗಳಿಂದ ಹೊರಹಾಕಿದ್ದೇನೆ ಎಂದರೆ ಸುಳ್ಳು.

ನಾವು ಸುಮಾರು ಮಡಕಲಕಟ್ಟೆ ಗ್ರಾಮದಲ್ಲಿ 25 ವರ್ಷಗಳಿಂದ ವಾದಿಗಳು ನಮ್ಮನ್ನು ಹೊಡೆದಿರುವ ಕಾರಣ ವಾಸಿಸುತ್ತಿದ್ದೇನೆ. ನನ್ನ ಅಜ್ಜಿ ದಾಸರ ಓಬಯ್ಯನೊಂದಿಗೆ ಸರಿಯಾಗಿ ಬಾಳ್ವೆ ಮಾಡದ ಕಾರಣ ಆತ ವಾದಿಗಳ ತಾಯಿಯನ್ನು ಮದುವೆಯಾಗಿರುತ್ತಾನೆ ಎಂದರೆ ಸರಿಯಲ್ಲ. ನಾನು ಬಂಗಾರಿ ವಂಶಸ್ಥನಲ್ಲ, ದಾಸರ ವಂಶಸ್ಥ. ಆದರೆ ಆ ರೀತಿ ಬರೆಸಿರಬಹುದು ನನಗೆ ಗೊತ್ತಿಲ್ಲ.

ದಾಸರ ಓಬಯ್ಯನಿಗೆ ನನ್ನ ಅಜ್ಜ ಹೆಂಡತಿ ಎಂದು ತೋರಿಸಲು ಪಹಣಿ ಪತ್ರಿಕೆಯನ್ನು ಹಾಜರುಪಡಿಸಿರುತ್ತೇನೆ. ನಾನು ಆ ರೀತಿ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಗಳನ್ನು ದಾಸರ ವಂಶಸ್ಥರೆಂದು, ಪ್ರತಿವಾದಿಗಳನ್ನು ಬಂಗಾರಿ ವಂಶಸ್ಥರೆಂದು ಊರಿನಲ್ಲಿ ಕರೆಯುತ್ತಾರೆ ಎಂದರೆ ಸುಳ್ಳು. ಆ ರೀತಿ ಎಲ್ಲ ದಾಖಲಾತಿಗಳನ್ನು ನಾನು ಹೇಳಿ ಬರೆಸಿರುತ್ತೇನೆ ಎಂದರೆ ಸುಳ್ಳು. ವಾದಿಗಳು ದಾಸರ ಓಬಯ್ಯನ ಅಜ್ಜಿಯ ತಂಗಿಯ ಮಕ್ಕಳು ಅಂದರೆ ನನ್ನ ತಾತನ 2 ನೇ ಹೆಂಡತಿಯ ಮಕ್ಕಳು ಎಂದರೆ ಸುಳ್ಳು.

ಪ್ರತಿವಾದ ಪತ್ರ ಖಂಡಿಕೆ 11(ಡಿ)ರಲ್ಲಿ ಹೇಳಿರುವ ಆಸ್ತಿಗಳಿಗೂ ನನಗೂ ಸಂಬಂಧ ಇಲ್ಲ. ಸಾಕ್ಷಿ ಮುಂದುವರೆದು ಅದು ಭೀಮಜ್ಜ ಮತ್ತು ಗಿಡ್ಡಪ್ಪನವರಿಗೆ ಸೇರಿದ ಆಸ್ತಿಗಳು. ಭೀಮಜ್ಜ ಮತ್ತು ಗಿಡ್ಡಪ್ಪನವರು ವಾದಿಗಳ ಗಂಡಂದಿರು. ಈ ಹಿಂದೆ ವಾದಿಗಳು ಹೂಡಿದ ದಾವಾ ಯಾವ ಕಾರಣಕ್ಕೆ ವಜಾಗೊಂಡಿತ್ತು ಎಂದರೆ ಅಗತ್ಯ ಪಕ್ಷಗಾರರನ್ನು ಸೇರಿಸಿರುವುದಿಲ್ಲ ಎಂದು ವಜಾಗೊಂಡಿರುತ್ತದೆ. ಸಾಕ್ಷಿ ಮುಂದುವರೆದು ನಾಯಕರ ಬೋರಯ್ಯನಿಗೆ 3 ಜನ ಮಕ್ಕಳು ಇದ್ದು, ಅವರನ್ನು ಸೇರಿಸಿ ಬೇಕಾದರೆ ವಾದಿಗಳು ಪಾಲು ವಿಭಾಗವನ್ನು ಕೇಳಬಹುದು.

ವಾದಿಗಳು ಈ ಹಿಂದೆ ಹೂಡಿದ ದಾವೆಗಳು ಪಾಲು ವಿಭಾಗ ಕೋರಬೇಕು ಎಂಬ ಕಾರಣಕ್ಕೆ ವಜಾಗೊಂಡಿರುತ್ತದೆ ಎಂಬುದನ್ನು ನಾನು ತಿಳಿದುಕೊಂಡಿರುವುದಿಲ್ಲ. ವಾದಿಗಳು ಹಾಗೂ ನಮಗೂ ಈವರೆಗೂ ಭಾಗ ಆಗಿಲ್ಲ ಎಂದರೆ ಹೌದು. ಸಾಕ್ಷಿ ಮುಂದುವರೆದು ಅವರಿಗೂ ನಮಗೂ ಸಂಬಂಧ ಇಲ್ಲ. ವಾದಿಗಳಿಗೆ ಆಸ್ತಿಗಳಲ್ಲಿ ಹಕ್ಕು ಇದ್ದರು ಇಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳಿಗೂ ದಾವಾ ಆಸ್ತಿಗಳಲ್ಲಿ ಸಮಪಾಲು ಇದೆ ಎಂದರೆ ಸುಳ್ಳು. ವಾದಿಗಳಿಗೆ ದಾವಾ ಆಸ್ತಿಯಲ್ಲಿ ಸಮಪಾಲು ಇದ್ದರು ಸಹ ನಾನು ಅವರಿಗೆ ತಿಳಿಯದೇ ನನ್ನ ಹೆಸರಿಗೆ ಪಹಣಿ ಪತ್ರಿಕೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಗಳಿಗೆ ಹಕ್ಕು ಇದೆ ಎಂಬ ವಿಚಾರವನ್ನು ವಾದಿಗಳು ನೋಟಿಸ್ ಮುಖಾಂತರ ನಾನು ಸಾಲ ಪಡೆದಿದ್ದ ಹೆಚ್ ಡಿ ಎಫ್ ಸಿ ಬ್ಯಾಂಕ್‌ರವರಿಗೆ ತಿಳಿಸಿದ್ದು ಬ್ಯಾಂಕಿನವರು ನನ್ನ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲು ಮಾಡಿರುತ್ತಾರೆ ಹೀಗಿದ್ದಾಗ ನಾನು ಸಂಪೂರ್ಣ ಸಾಲವನ್ನು ತಿರುವಳಿ ಮಾಡಿದ ಕಾರಣ ಅದು ಮುಕ್ತಾಯಗೊಂಡಿದೆ ಎಂದರೆ ಎಲ್ಲಾ ಸುಳ್ಳು.

ಪಾಟೀ ಸವಾಲು ಮುಕ್ತಾಯ.

ಮರು ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ.ಎಸ್. ನಂ. 84/2013

ಡಿ.ಡಬ್ಲ್ಯು: 01 (ಪಾಲಯ್ಯ)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ಕೂಡ್ಲಿಗಿ.